ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE: 20/4/21

### ಬೆಂಗಳೂರಿನಲ್ಲಿ 97 ಸಾವು । ಸಾರ್ವಕಾಲಿಕ ದಾಖಲೆ

# ಒಂದೇ ದಿನ 146 ಬಲಿ!

### 2ನೇ ಅಲೆಗೆ ಮೊದಲ ಬಾರಿ ರಾಜ್ಯದಲ್ಲಿ 100ಕ್ಕೂ ಹೆಚ್ಚು ಸಾವು । ಶೀಘ್ರ ನಿತ್ಯ 200+?

• **ಕನ್ನಡ ಪ್ರಭ ವಾರ್ತೆ** ಬೆಂಗಳೂರು 20/4/21

ಕೋವಿಡ್-19ರ ಬಿಗಿ ಹಿಡಿತದಿಂದ ರಾಜ್ಯ ತತ್ತರಿಸಿದ್ದು, ಸೋಮವಾರ ಬರೋಬ್ಬರಿ 146 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಈ ಮೂಲಕ ಕೋವಿಡ್ 2ನೇ ಅಲೆ ತೀವ್ರವಾಗಿ ಹಬ್ಬಬಹುದು, ಆದರೆ ದೊಡ್ಡ ಮಟ್ಟದಲ್ಲಿ ಪ್ರಾಣಕ್ಕೆ ಎರವಾಗಲಾರದು ಎಂಬ ತಜ್ಞರ ಅಭಿಪ್ರಾಯ ತಲೆಕೆಳಗಾಗಿದೆ. 2020ರ ಸೆಪ್ಟೆಂಬರ್ ಬಳಿಕದ ಅತಿ ಹೆಚ್ಚು ಕೋವಿಡ್ ಸಾವು ಸೋಮವಾರ ವರದಿಯಾಗಿದೆ.



ಸೋಮವಾರ 15,785 ಮಂದಿಯಲ್ಲಿ ಸೋಂಕು ದೃಢ ಪಟ್ಟಿದ್ದು 7,098 ಮಂದಿ ಗುಣಮುಖರಾಗಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 1.42 ಲಕ್ಷಕ್ಕೆ ಏರಿಕೆ ಕಂಡಿದೆ. 721 ಮಂದಿ ಐಸಿಯುನಲ್ಲಿದ್ದಾರೆ.

ಸೆಪ್ಟೆಂಬರ್ 18ರಂದು 179 ಮಂದಿ ಕೋವಿಡ್‌ನಿಂದ ಮರಣವನ್ನಪ್ಪಿದ್ದರು. ಆ ಬಳಿಕದ ಗರಿಷ್ಠ ಸಾವಿನ ಪ್ರಮಾಣ ಸೋಮವಾರ ವರದಿಯಾಗಿದೆ. ಬೆಂಗಳೂರಿನಲ್ಲೇ 97 ಮಂದಿ ಮರಣವನ್ನಪ್ಪಿದ್ದಾರೆ. ಹಾಸನದಲ್ಲಿ 11 , ಮೈಸೂರು 8, ಬೆಂ. ಗ್ರಾಮಾಂತರ, ಕಲಬುರಗಿ 6, ಧಾರವಾಡ 3, ಬೀದರ್, ಚಿಕ್ಕಬಳ್ಳಾಪುರ, ಯಾದಗಿರಿ 2, ವಿಜಯಪುರ, ಉತ್ತರ ಕನ್ನಡ, ತುಮಕೂರು, ರಾಮನಗರ, ಕೊಡಗು, ಕೋಲಾರ, ಹಾವೇರಿ, ಬೆಳಗಾವಿ ಮತ್ತು ಬಳ್ಳಾರಿಯಲ್ಲಿ ತಲಾ ಒಬ್ಬರು ಮೃತರಾಗಿದ್ದಾರೆ. ➘ 9

## 2.73 ಲಕ್ಷ ಕೇಸ್ ದೇಶದಲ್ಲಿ ದಾಖಲೆ

### ಒಂದೇ ದಿನ 1619 ಸಾವು

**ನವದೆಹಲಿ:** ಸೋಮವಾರ ದೇಶದಲ್ಲಿ ಸಾರ್ವಕಾಲಿಕ ದಾಖಲೆಯ 2,73,810 ಜನರಲ್ಲಿ ಸೋಂಕು ಪತ್ತೆಯಾಗಿದೆ. 1619 ಮಂದಿ ಸಾವಿಗೀಡಾಗಿದ್ದಾರೆ. ಇದರೊಂದಿಗೆ ದೇಶದಲ್ಲಿ ಈವರೆಗೆ ಕೊರೋನಾಗೆ ತುತ್ತಾದವರ ಸಂಖ್ಯೆ 1.50 ಕೋಟಿ ದಾಟಿದೆ. ವಿವರ ➘ 11

### ಸಾವು ಇಳಿಸಲು ನಿರ್ಬಂಧ ಬೇಕು

**ಸಾವು ಕಡಿಮೆಯಾಗಬೇಕಾದರೆ ಕಠಿಣ ನಿಯಮಗಳು ಜಾರಿಯಾಗಬೇಕು. ಸೋಂಕಿಗೆ ಕಡಿವಾಣ ಹಾಕದಿದ್ದರೆ ಮಹಾರಾಷ್ಟ್ರದಂತಹ ಸಮಸ್ಯೆ ನಮ್ಮಲ್ಲೂ ಉಂಟಾಗುತ್ತದೆ.**

• **ಡಾ। ಗಿರಿಧರ್ ಬಾಬು**
ಕೋವಿಡ್ ಸಮಿತಿ ಸದಸ್ಯ

---

## ಕೊರೋನಾಗೆ ಒಂದೇ ದಿನ 146 ಬಲಿ!

➘ ಮೊದಲ ಪುಟದಿಂದ ಕ.ಪ್ರ. 20/4/21

ಮೃತಪಟ್ಟವರಲ್ಲಿ 32 ಮಂದಿ 50 ವರ್ಷದೊಳಗಿನವರು. ರಾಜ್ಯದಲ್ಲಿ ಈವರೆಗೆ ಒಟ್ಟು 11.76 ಲಕ್ಷ ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದ್ದು ಈ ಪೈಕಿ 10.21 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಒಟ್ಟು 13,497 ಮಂದಿ ಮೃತರಾಗಿದ್ದಾರೆ. 2.37 ಕೋಟಿ ಕೊರೋನಾ ಪರೀಕ್ಷೆ ನಡೆಸಲಾಗಿದೆ. ಸೋಮವಾರ 1.23 ಲಕ್ಷ ಮಂದಿ ಕೋವಿಡ್ ಪರೀಕ್ಷೆಗೆ ಒಳಗಾಗಿದ್ದು ಈ ಪೈಕಿ ಶೇ.12.81 ಪರೀಕ್ಷೆಗಳು ಪಾಸಿಟಿವ್ ಬಂದಿವೆ.

ಬೆಂಗಳೂರು ನಗರದಲ್ಲಿ 9,618, ತುಮಕೂರು 652, ಮೈಸೂರು 568, ಕಲಬುರಗಿ 513, ಹಾಸನ 320, ಬೀದರ್ 318, ವಿಜಯಪುರ 302, ಧಾರವಾಡ 283, ಮಂಡ್ಯ 279, ಬಳ್ಳಾರಿ 248, ರಾಯಚೂರು 228, ದಕ್ಷಿಣ ಕನ್ನಡ 218, ದಾವಣಗೆರೆ 199, ಯಾದಗಿರಿ 190, ಬೆಂಗಳೂರು ಗ್ರಾಮಾಂತರ 180, ಚಿಕ್ಕಬಳ್ಳಾಪುರ 175, ಶಿವಮೊಗ್ಗ 169, ಉಡುಪಿ 163, ಉತ್ತರ ಕನ್ನಡ 106, ಕೋಲಾರ 146, ಚಿಕ್ಕಮಗಳೂರು 142, ಕೊಪ್ಪಳ 100 ಪ್ರಕರಣ ವರದಿಯಾಗಿದೆ.

### ನಿನ್ನೆ 84700 ಜನರಿಗೆ ಕೋವಿಡ್ ಲಸಿಕೆ

**ಸೋಮವಾರ** 4,567 ಲಸಿಕಾ ಕೇಂದ್ರದಲ್ಲಿ 84,785 ಮಂದಿ ಲಸಿಕೆ ಪಡೆದಿದ್ದಾರೆ. ಈ ಪೈಕಿ ಯಾರಲ್ಲಿಯೂ ಅಡ್ಡ ಪರಿಣಾಮ ಕಾಣಿಸಿಕೊಂಡಿಲ್ಲ. ರಾಜ್ಯದಲ್ಲಿ ಈವರೆಗೆ 71.15 ಲಕ್ಷ ಡೋಸ್ ಲಸಿಕೆ ನೀಡಲಾಗಿದೆ. 45 ವರ್ಷದಿಂದ 59 ವರ್ಷದೊಳಗಿನ 42,700 ಮಂದಿ, 60 ವರ್ಷ ಮೇಲ್ಪಟ್ಟ 40 ಸಾವಿರ ಮಂದಿ, ಆರೋಗ್ಯ ಕಾರ್ಯಕರ್ತರು 904 ಮಂದಿ, ಮುಂಚೂಣಿ ಕಾರ್ಯಕರ್ತರು 1,088 ಮಂದಿ ಕೋವಿಡ್ ಲಸಿಕೆ ಪಡೆದಿದ್ದಾರೆ.